# ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಅಧಿನಿಮಯದ ಅಪರಾಧಗಳ ವಿಶೇಷ ನ್ಯಾಯಾಲಯ ಮತ್ತು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಜಿಲ್ಲೆ, ರಾಯಚೂರು.

ಸ್ಪೇಷಲ್ .ಸಿ **ಸಂಖ್ಯೆಃ 367/2020**

ಪ್ರಾ.ಸಾ-03

ಚಾ.ಸಾ-03

ಸಾಕ್ಷಿದಾರರು ಕ್ರಮವಾಗಿ ಪ್ರಮಾಣ ವಚನ ಮಾಡಿದರು ದಿನಾಂಕ 06-12-2021.

| | |
|---|---|
| ಸಾಕ್ಷಿದಾರರ ಹೆಸರು | ಲಕ್ಷ್ಮೀ |
| ಗಂಡನ ಹೆಸರು | ಗೋಪಾಲ |
| ವಯಸ್ಸು | 45 |
| ಉದ್ಯೋಗ | ಮನೆಕೆಲಸ |
| ವಾಸಸ್ಥಳ | ದೇವದುರ್ಗ |

**ಮುಖ್ಯ ವಿಚಾರಣೆ ಃ ಸಾರ್ವಜನಿಕ ಅಭಿಯೋಜಕ**ರಾದ ಮಂಜುನಾಥ ರವರಿಂದ .

ನನಗೆ ಚಾ.ಸಾ-1 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ಚಾ.ಸಾ-2, 4 ರಿಂದ 7 ರವರ ಪರಿಚಯ ಇದೆ. ಆರೋಪಿತರು ಊರಲ್ಲಿ ಅವರ ಜಾಗೆಯಲ್ಲಿ ಮನೆ ಕಟ್ಟುತ್ತಿದ್ದರು. ಅವರ ಮನೆಯ ಪಕ್ಕದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಒಂದು ಬೋರ್ ಇತ್ತು. ಆ ಬೋರವೆಲ್ ನ್ನು ಮನೆಯ ಒಳಗೆ ಮಾಡಿಕೊಂಡು ಮನೆ ಕಟ್ಟುತ್ತಿದ್ದರು. ನಾನು ಹಾಗೂ ನಮ್ಮ ಓಣಿಯಲ್ಲಿರುವ ಚಾ.ಸಾ-1, 2, 4 ರಿಂದ 7 ರವರು ಹೋಗಿ ಆರೋಪಿತರಿಗೆ ಇದು ಸರ್ಕಾರಿ ಬೋರ್ ವೆಲ್ ಅದನ್ನು ಬಿಟ್ಟು ಮನೆ ಕಟ್ಟಿಕೊಳ್ಳಿ ಎಂದು ತಕರಾರು ಮಾಡಿದೆವು, ಆ ಬೋರನ್ನು ಸಾರ್ವಜನಿಕ ಉಪಯೋಗಕ್ಕಾಗಿ ಸರ್ಕಾರದವರು ಮಾಡಿಕೊಟ್ಟಿದ್ದು ಎಂದು ಹೇಳಿದೇವು.

2. ದಿನಾಂಕ 25-06-2020 ರಂದು ಸಂಜೆ 4-00 ಗಂಟೆಗೆ ಬೋರವೆಲ್ಲನ್ನು ಬಿಟ್ಟು ಮನೆ ಕಟ್ಟಿರಿ ಎಂದು ಹೇಳಿದೆವು. ಸಂಜೆ 4-00 ರಿಂದ 5-00 ಕ್ಕೆ ನಮ್ಮ ಮನೆಯ ಕಟ್ಟೆಯ ಮೇಲೆ ನಾವು ಮತ್ತು ಚಾ.ಸಾ-1 ಮಾತನಾಡುತ್ತಾ ಕುಳಿತಿದ್ದೆವು. ಸುಮಾರು 5-00 ಗಂಟೆಗೆ ಆರೋಪಿತರಿಬ್ಬರೂ

ಕೂಡಿ ಬಂದು ಚಾ.ಸಾ-1 ರವರಿಗೆ ಮಾದಿಗ ಸೂಳೆ ನಿನ್ನದೇ ಬಹಳ ಆಗಿದೆ ಎಲ್ಲಾರನ್ನು ಸೇರಿಸಿಕೊಂಡು ತಕರಾರು ಮಾಡುತ್ತಿಯಾ ಎಂದು ಕಟ್ಟೆಯ ಮೇಲೆ ಕುಳಿತಿದ್ದ ಚಾ.ಸಾ-1 ರವರನ್ನು ಕೂದಲು ಹಿಡಿದು ಎಳೆದು ಮಾದಿಗ ಸೂಳೆ ನಿನ್ನನ್ನು ಬಿಡಬಾರದು ಎಂದು ಎಳೆದಾಡಿ ಕೈಯಿಂದ ಬೆನ್ನಿಗೆ, ಹೊಟ್ಟೆಗೆ ಕಾಲಿನಿಂದ ಒದ್ದಿರುತ್ತಾರೆ. ಆಗ ಅವರು ಚೀರಾಡುತ್ತಿದ್ದಾಗ ಅಲ್ಲಿಯೇ ಇದ್ದ ನಾನು ಮತ್ತು ಚಾ.ಸಾ-2, 4 ರಿಂದ 7 ರವರು ಬಿಡಿಸಿದೆವು, ಆಗ ಆರೋಪಿತರು ನಮಗೂ ಸಹ ಬಿಡಿಸಲು ಬಂದರೆ ನಿಮ್ಮನ್ನು ಸಹ ಕೊಲೆ ಮಾಡುವದಾಗಿ ಕೊಲೆ ಬೆದರಿಕೆ ಹಾಕಿದರು. ಚಾ.ಸಾ-1 ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಬಂದು ದೂರು ಕೊಟ್ಟಿದ್ದಾಳೆ. ನಂತರ ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲು : ಆರೋಪಿತರ ಪರವಾಗಿ ಶ್ರೀ ಎಮ್.ಜೆಡ್.ಪಿ ವಕೀಲರಿಂದ :-**

ನಾನು ಶಾಲೆಗೆ ಹೋಗಿಲ್ಲ. ಈ ದಿನ ನನ್ನನ್ನು ಚಾ.ಸಾ-1 ಕರೆದುಕೊಂಡು ಬಂದಿದ್ದಾಳ ಎಂದರೆ ಸರಿ. ಆಕೆ ಹೇಳಿಕೊಟ್ಟಂತೆ ನಾನು ಈ ದಿನ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾರೂ ಇದೇ ರಿತಿ ಸಾಕ್ಷಿ ಹೇಳಿ ಎಂದು ಹೇಳಿಕೊಟ್ಟಿಲ್ಲ. ಜಗಳ ಆಗಿ 4-5 ದಿನದ ಮೇಲೆ ಪೋಲಿಸರು ಬಂದು ನಮ್ಮನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡು ಹೋಗಿದ್ದಾರೆ. ಪೋಲಿಸರು ಹೇಳಿಕೆ ಪಡೆಯುವ ಸಮಯದಲ್ಲಿ ನಮ್ಮ ಸಹಿ ಪಡೆದಿಲ್ಲ. ಪೋಲಿಸರು ನನ್ನನ್ನು ಬಂದು ಕೇಳೀಲ್ಲ.

2. ಇದೆ ಮೊದಲ ಬಾರಿಗೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಇದೆ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ. ನಮ್ಮ ಎಲ್ಲರ ಮನೆ ಸರ್ಕಾರಿ ಆಸ್ಪತ್ರೆಯ ಹಿಂದೆ ಇವೆ ಎಂದರೆ ಸರಿ. ನಮ್ಮ ಮನೆಯಿಂದ ದೇವದುರ್ಗ ಪೋಲಿಸ್ ಠಾಣೆ ಬಹಳ ಹತ್ತಿರ ಇದೆ ಎಂದರೆ ಸರಿ. 5 ನಿಮಿಷದಲ್ಲಿ ನಾವು ಪೋಲಿಸ್ ಠಾಣೆಗೆ ಹೋಗಬಹುದು ಎಂದರೆ ಸರಿ. ಆಸ್ಪತ್ರೆಗೆ ಚಾ.ಸಾ-1 ಈಕೆಯನ್ನು ಕರೆದುಕೊಂಡು ಹೋಗಿದ್ದೆವು. ಆಸ್ಪತ್ರೆಯಲ್ಲಿ ನಾವು ಸುಮಾರು ಒಂದು ತಾಸು ಇದ್ದೆವು. ಆಸ್ಪತ್ರೆಗೆ ಪೋಲಿಸರು ಬಂದಿದ್ದರು. ಆಸ್ಪತ್ರೆಯಲ್ಲಿ ನನ್ನನ್ನು ಮತ್ತು ಚಾ.ಸಾ-1 ರವರನ್ನು ವಿಚಾರಣೆ ಮಾಡಿದರು.

3. ದಿನಾಂಕ 25-06-2020 ರಂದು ಯಾವುದೇ ಘಟನೆ ಆಗಿಲ್ಲ ಆರೋಪಿತರು ಚಾ.ಸಾ-1 ರವರಿಗೆ ಒದ್ದಿಲ್ಲ ಎಂದರೆ ಸರಿಯಲ್ಲ. ಬೇರೆಯವರ ಜೊತೆಗೆ ನಾನು ಜಗಳವನ್ನು ಬಿಡಿಸಿದ್ದೇನೆ ಎಂದು

ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಜಗಳ ಬಿಡಿಸಲಿಕ್ಕೆ ಬರಬೇಡಿ ನಿಮ್ಮನ್ನು ಸಹ ಬಿಡುವದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಬೋರನ್ನು ಹೊರಗೆ ಬಿಟ್ಟು ಮನೆ ಕಟ್ಟಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಚಾ.ಸಾ-1 ಹೇಳಿದಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಕ್ತ ಉಲ್ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು)

ಓ. ಹೇ. ಕೇ. ಸರಿ ಇದೆ.

1ನೇ ಹೆಚುವರಿ ಸತ್ರ ನ್ಯಾಯಾಧೀಶರು,
ರಾಯಚೂರು.